

# ನೀರೆಯರು ಮೆಚ್ಚಿದ ಸಿಂಗಾರ ಲೈಟ್ ವೇಯ್ಟ್ ಬಂಗಾರ

**ಬಂಗಾರದ ಬೆಲೆ ಏರಿಕೆ ನಡುವೆ 'ಲೈಟ್ ವೇಯ್ಟ್' ಚಿನ್ನದ ಒಡವೆಗಳು ಆಭರಣಪ್ರಿಯರ ಕಣ್ಸೆಳೆಯುತ್ತಿವೆ. ಚಿನ್ನ–ಬೆಳ್ಳಿಯ ಹಗುರ ವಿನ್ಯಾಸದ ಆಭರಣಗಳು ಟ್ರೆಂಡ್‌ನಲ್ಲಿವೆ. ಜೇಬಿಗೂ ಭಾರ ಎನಿಸದ, ಚೆಂದವಾಗಿಯೂ ಕಾಣುವ ಈ 'ಲೈಟ್ ವೇಯ್ಟ್ ಚಿನ್ನಾಭರಣ'ಗಳು ಮಹಿಳೆಯರ ಸ್ಟೈಲ್ ಸ್ಟೇಟ್‌ಮೆಂಟ್ ಆಗಿವೆ.**

■ ಸುಮಲತಾ ಎನ್.

ಅದೊಂದು ಕಾಲವಿತ್ತು. ಬಂಗಾರದ ಒಡವೆಗಳನ್ನು ಜೋಪಾನವಾಗಿಟ್ಟು ಹಬ್ಬ ಹರಿದಿನಗಳಿಗೆ, ವಿಶೇಷ ಸಮಾರಂಭಗಳಿಗೆ ಮಾತ್ರ ತೊಡುವ ಪರಿಪಾಠವಿತ್ತು. ಗಟ್ಟಿ ಚಿನ್ನ, ಬೆಳ್ಳಿಗಷ್ಟೆ ಪ್ರಾಮುಖ್ಯವಿತ್ತು. ಭಾರತದಲ್ಲಂತೂ ಚಿನ್ನವನ್ನು ದೀರ್ಘಾವಧಿ ಯೋಜನೆ ರೀತಿ ಖರೀದಿ ಮಾಡಲಾಗುತ್ತಿತ್ತು. ಕಾಲ ಸರಿದಂತೆ ಈಗ ಜನರ ಆದ್ಯತೆಗಳೂ ಬದಲಾಗಿವೆ. ಚಿನ್ನ ಖರೀದಿಯಲ್ಲಿನ ಆಯ್ಕೆಗಳೂ ಸಾಕಷ್ಟಾಗಿವೆ. ಹೆಚ್ಚು ತೂಕವಿಲ್ಲದ, ಜೇಬಿಗೂ ಹಗುರವೆನಿಸುವಂಥ ಚಿನ್ನಾಭರಣ ಖರೀದಿಯತ್ತ ಜನರು ಹೊರಳುತ್ತಿದ್ದಾರೆ.

ಆರ್ಟಿಫಿಷಿಯಲ್ ಆಭರಣಗಳನ್ನು ಇಷ್ಟಪಡದ, ಅತಿ ಕಡಿಮೆ ತೂಕದಲ್ಲಿ ದೊಡ್ಡದಾಗಿ ಕಾಣಬಲ್ಲ ಚಿನ್ನ, ಬೆಳ್ಳಿ ಆಭರಣಗಳನ್ನು ಕೊಳ್ಳಲು ಬಯಸುವವರಿಗೆ ಇಂಥ ಹಗುರ ಒಡವೆಗಳು ಹೇಳಿ ಮಾಡಿಸಿದಂಥ ಆಯ್ಕೆಯಾಗಿವೆ.

ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಬೆಳ್ಳಿ, ಬಂಗಾರದ ಬೆಲೆ ಈ ಬದಲಾವಣೆಗೆ ಒಂದು ಕಾರಣವಾಗಿದ್ದರೆ, ಆಭರಣ ವಿನ್ಯಾಸದಲ್ಲಿನ ವಿಭಿನ್ನತೆ ಮತ್ತೊಂದು ಕಾರಣ. ಬೆಲೆ ಏರಿಕೆಯಾದರೂ ಚಿನ್ನ, ಬೆಳ್ಳಿ ಮೇಲಿನ ಬಯಕೆ ತಗ್ಗುವಂಥದ್ದಲ್ಲ. ಹೀಗಾಗಿ ಸುಂದರವಾಗಿಯೂ ಕಾಣಬಲ್ಲ, ಹಣ ಉಳಿತಾಯವಾಗಬಲ್ಲ 'ಲೈಟ್ ವೇಯ್ಟ್' ಚಿನ್ನದ ಒಡವೆಗಳನ್ನು ಖರೀದಿಸುವವರ ಸಂಖ್ಯೆ ಹೆಚ್ಚಾಗಿದೆ. ಹೆಚ್ಚು ತೂಕದ ಚಿನ್ನವಲ್ಲದೇ ಕಡಿಮೆ ಚಿನ್ನದಿಂದಲೇ ವಿನ್ಯಾಸಿತಗೊಂಡು ಸುಂದರವಾಗಿ ಕಾಣಬಲ್ಲ ಆಭರಣಗಳು ಜನಪ್ರಿಯತೆ ಗಳಿಸುತ್ತಿವೆ.

ಕಿವಿಯೋಲೆಗಳಿಂದ ಹಿಡಿದು ನೆಕ್ಲೇಸ್, ಲಾಂಗ್ ಚೈನ್, ಕಡಗ, ಬಳೆ, ಬ್ರೇಸ್‌ಲೆಟ್‌ಗಳನ್ನು ಆದ್ಯತೆಗೆ ತಕ್ಕಂತೆ ಕಡಿಮೆ ಚಿನ್ನ ಬಳಸಿ ಒಪ್ಪವಾಗಿ ವಿನ್ಯಾಸಗೊಳಿಸಲಾಗುತ್ತಿದೆ. ಅಧಿಕ ಭಾರವೆನಿಸದೇ, ಎಲ್ಲಾ ಕಾಲದಲ್ಲಿಯೂ ಆರಾಮವಾಗಿ ತೊಡಬಲ್ಲ ಹಗುರ ಚಿನ್ನಾಭರಣಗಳು ಯುವತಿಯರ ನೆಚ್ಚಿನ ಆಯ್ಕೆಯಾಗಿವೆ.